## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರ ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ:122 ಕ್ಕೆ ಉತ್ತರ

**ಪ್ರಶ್ನೆ:** ಬಳ್ಕುಂಜೆ, ಕೊಲ್ಲೂರು, ಉಳೆಪಾಡಿ ಗ್ರಾಮಗಳಲ್ಲಿ ಕೈಗಾರಿಕೆಗಳಿಗೆ ಭೂಸ್ವಾಧೀನ ಮಾಡಿಕೊಳ್ಳಲು ಕೆಐಎಡಿಬಿಯ ಪ್ರಕ್ರಿಯೆಯಲ್ಲಿ ಭೂ ಮಾಫೀಯಾದ ಪ್ರಭಾವದಿಂದ ಕೈಗಾರಿಕೆ ಸೂಕ್ತವಲ್ಲದ ಜಮೀನನ್ನು ಸ್ವಾಧೀನಪಡಿಸಲು ಅಧಿಸೂಚನೆ ಹೊರಡಿಸುವ ಹಂತದಲ್ಲಿಯ ಅಧಿಸೂಚನೆಯನ್ನು ಮೂಡಬಿದ್ರೆ ಶಾಸಕರ ಪ್ರಭಾವದ ಮೇಲೆ ಕರ್ನಿರೆ ಹಾಗೂ ಅತಿಕಾರಿಬೆಟ್ಟುವಿನ ಗ್ರಾಮಗಳನ್ನು ಬದಲಾಯಿಸಿ, ಬಳ್ಕುಂಜೆ, ಕೊಲ್ಲೂರು, ಉಳೆಪಾಡಿ ಗ್ರಾಮಗಳು ತರುವಂತೆ ಹಸ್ತಕ್ಷೇಪ ಮಾಡಿರುವುದು ದಾಖಲೆಗಳಿಂದ ತಿಳಿದುಬಂದಿದ್ದು, ಈ ಬಗ್ಗೆ ತನಿಖೆ ನಡೆಸಿ ಅವೈಜ್ಞಾನಿಕವಾಗಿ ಉಪಯೋಗವಲ್ಲದ ಭೂಮಿಯನ್ನು ಸ್ವಾಧೀನ ಪಡಿಸಿ, ಭೂ ಮಾಫೀಯ ರವರಿಗೆ ಸಹಕಾರ ನೀಡುವ ನಿರ್ಣಯವನ್ನು ಕೂಡಲೇ ಕೈಬಿಡುವಂತೆ ಒತ್ತಾಯಿಸುವಂತೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.

*********

**ಉತ್ತರ:**

ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 06-02-2020 ರಂದು ಜರುಗಿದ ಏಕಗವಾಕ್ಷಿ ಸಮಿತಿ ಸಭೆಯ ನಡವಳಿಯಂತೆ ಈ ಹಿಂದೆ ಗುರುತಿಸಿದ್ದ ಕರ್ನಿರೆ , ಅತಿಕಾರಿಬೆಟ್ಟು ಮತ್ತು ಕವತ್ತಾರು ಗ್ರಾಮದ ಜಮೀನು ಕೈಗಾರಿಕಾ ಪ್ರದೇಶಕ್ಕೆ ಸೂಕ್ತವಲ್ಲವೆಂದು ಹಾಗೂ ಸದರಿ ಗ್ರಾಮಗಳಿಗೆ ಹೊಂದಿಕೊಂಡಂತೆ ಇರುವ ಬಳ್ಕುಂಜೆ ಹಾಗೂ ಇನ್ನಿತರ ಗ್ರಾಮಗಳಲ್ಲಿ ಸ್ಥಳ ಪರಿಶೀಲನೆ ನಡೆಸಿ, ಸೂಕ್ತ ಜಾಗವನ್ನು ಗುರುತಿಸಲು ಸೂಚಿಸಿರುವ ಕುರಿತು ಸಭೆಯ ನಡವಳಿಯಲ್ಲಿ ದಾಖಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕಾ ಸ್ಥಾಪನೆಗೆ ಹೆಚ್ಚಿನ ಒತ್ತು ನೀಡಿ ಕೈಗಾರಿಕಾ ಅಭಿವೃದ್ಧಿಗೊಳಿಸಿ ಸ್ಥಳೀಯ ವಿದ್ಯಾವಂತರಿಗೆ, ಯುವಕ ಯುವತಿಯರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ದಕ್ಷಿಣ ಕನ್ನಡ ಜಿಲ್ಲೆ ಮುಲ್ಕಿ ತಾಲೂಕಿನ ಬಳ್ಕುಂಜೆ, ಕೊಲ್ಲೂರು ಮತ್ತು ಉಳೆಪಾಡಿ ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ದಿನಾಂಕ: 07-01-2022 ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ.

| ತಾಲ್ಲೂಕು | ಗ್ರಾಮ | ವಿಸ್ತೀರ್ಣ (ಎ.ಸೆಂ) | | ಒಟ್ಟು ವಿಸ್ತೀರ್ಣ (ಎ.ಸೆಂ) |
|---|---|---|---|---|
| | | ಖಾಸಗಿ | ಸರಕಾರಿ | |
| ಮುಲ್ಕಿ | 29-ಕೊಲ್ಲೂರು | 324.3500 | 58.9350 | 383.2850 |
| | 24-ಬಳ್ಕುಂಜೆ | 301.8850 | 52.95 | 354.8350 |
| | 28 ಉಳೆಪಾಡಿ | 323.4950 | 29.9550 | 353.4500 |
| | **ಒಟ್ಟು** | **949.7300** | **141.8400** | **1091.5700** |

ಸದರಿ ಜಮೀನುಗಳನ್ನು ದಿನಾಂಕ:24-07-2025ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ. ರವರು ಸ್ಥಳ ತನಿಖೆ ಜರುಗಿಸಿರುತ್ತಾರೆ.

ಪ್ರಸ್ತಾವಿತ ಜಮೀನಿನ ಮೇಲ್ಮೈ, ಗುಡ್ಡ, ತಗ್ಗು ಪ್ರದೇಶವನ್ನು ಗುರುತಿಸಿಸುವ ಬಗ್ಗೆ TOPOGRAPHICAL SURVEY ಮಾಡಲು ನಿರ್ದೇಶನ ನೀಡಿದ್ದು, ಸದರಿ ಅಧಿಸೂಚಿತ ಜಮೀನಿನ ಪ್ರಾಥಮಿಕ ಟೋಪೋಗ್ರಾಫಿಕ್ ಸರ್ವೆ ವರದಿಯನುಸಾರ ಒಟ್ಟು 1091-00 ಎಕರೆ ಸ್ವಾಧೀನ ಪ್ರದೇಶದ ಪೈಕಿ ಸುಮಾರು 250 ರಿಂದ 300 ಎಕರೆ ಪ್ರದೇಶವನ್ನು ಹೊರತುಪಡಿಸಿ ಉಳಿಕೆ ಜಮೀನು ಗುಡ್ಡ ಹಾಗೂ ಇಳಿಜಾರಿನಿಂದ ಕೂಡಿರುವುದು ಕಂಡುಬಂದಿರುತ್ತದೆ.

ಮುಂದುವರೆದು, ಸದರಿ 1091 ಎಕರೆ ಪ್ರದೇಶದಲ್ಲಿ ಕೈಗಾರಿಕಾ ಬಡಾವಣೆಯನ್ನು ರಚಿಸಲು ಸುಮಾರು 250 ರಿಂದ 300 ಎಕರೆ ಜಾಗ ಲಭ್ಯವಾಗುತ್ತಿದ್ದು, ಲಭ್ಯವಾಗುವ ಜಮೀನಿನಲ್ಲಿ ಕೈಗಾರಿಕಾ ಬಡಾವಣೆ ರಚಿಸಬಹುದಾಗಿರುತ್ತದೆ. ಉಳಿಕೆ ಜಮೀನಿನಲ್ಲಿ ಅಭಿವೃದ್ಧಿಪಡಿಸುವುದು ತಾಂತ್ರಿಕವಾಗಿ ಕಾರ್ಯ ಸಾಧ್ಯವಾಗುವುದಿಲ್ಲವೆಂದು ಮಂಡಳಿಯ ಅಭಿಯಂತರ ಶಾಖೆಯು ಅಭಿಪ್ರಾಯಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಕೈಗಾರಿಕಾ ಪ್ರದೇಶದ ಅಭಿವೃದ್ಧಿಗೆ ಪೂರಕವಾಗುವ ವಿಸ್ತೀರ್ಣದ ಜಮೀನಿನ ಭೂಸ್ವಾಧೀನವನ್ನು ಮುಂದುವರೆಸಿ, ಉಳಿದ ಜಮೀನುಗಳನ್ನು ಕೈಬಿಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುತ್ತದೆ.

**ಸಂಖ್ಯೆ: ಸಿಐ 151 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.